ಅಲ್ಲಿ ಸುಮಾರು 20 ಸಾವಿರ ಜನರಿದ್ದಾರೆ. 3 ವೈದ್ಯರು ಇದ್ದಾರೆ. ಅಲ್ಲಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ಬೇಕಾದ ಎಲ್ಲಾ ಸೌಲಭ್ಯಗಳು ಇದೆ. ಕಟ್ಟಡ, ಸ್ಥಳ ಎಲ್ಲವೂ ಇದೆ. ಆದ್ದರಿಂದ ದಯವಿಟ್ಟು ಅದನ್ನು ಈ ವರ್ಷದಲ್ಲಿ ಸಮುದಾಯ ಆರೋಗ್ಯ ಕೇಂದ್ರವಾಗಿ ಮೇಲ್ದರ್ಜೆಗೆ ಏರಿಸುವ ಬಗ್ಗೆ ನಿರ್ದಿಷ್ಟವಾಗಿ ಹೇಳಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ.

ಶ್ರೀ ಬಿ. ಶ್ರೀರಾಮುಲು: ವೈದ್ಯರ ಬಗ್ಗೆ ಅವರೇನು ತಿಳಿಸಿದರು ಅದರ ಬಗ್ಗೆ ತಕ್ಷಣ ಕ್ರಮ ಕೈಗೊಳ್ಳುತ್ತೇನೆ. ನಿನ್ನೆ ಸಹ ತಾವು ಇದಕ್ಕೆ ಸಂಬಂಧಿಸಿದಂತೆ ಪತ್ರವನ್ನು ಕೊಟ್ಟಿದ್ದೀರಿ. ಕೈವಾರ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯರ ಕೊರತೆ ಇದೆ. ಜೊತೆಗೆ ಏನೇನು ಮಾಡಬೇಕು ಎಂಬ ಬಗ್ಗೆ ಪತ್ರವನ್ನು ಕೊಟ್ಟಿದ್ದೀರಿ. ಅಧಿಕಾರಿಗಳ ಜೊತೆ ನಾನು ಮಾತನಾಡಿದ್ದೇನೆ. ಇನ್ನೊಂದು ವಾರದಲ್ಲಿ ಇದನ್ನು ಸರಿಪಡಿಸುತ್ತೇನೆ. ಸಮುದಾಯ ಆರೋಗ್ಯ ಕೇಂದ್ರದ ಬಗ್ಗೆ ಪ್ರಸ್ತಾವನೆ ಬಂದಿಲ್ಲ.ಆ ದಷ್ಟು ಬೇಗ ಅದಕ್ಕೆ ಯಾವ ರೀತಿಯಾಗಿ ವ್ಯವಸ್ಥೆ ಮಾಡಬೇಕೊ ಅದನ್ನು ಮಾಡಲು ಪ್ರಯತ್ನ ಮಾಡುತ್ತೇನೆ.

ಸರ್ಕಾರಿ ಆಸ್ಪತ್ರೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ವೈದ್ಯರನ್ನು ಖಾಯಂಗೊಳಿಸುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	126(521)
ಸದಸ್ಯರ ಹೆಸರು	:	ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ)
ಉತ್ತರಿಸುವ ದಿನಾಂಕ	:	31-07-2008
ಉತ್ತರಿಸುವ ಸಚಿವರು	:	ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಸರ್ಕಾರಿ ಆಸ್ಪತ್ರೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ವೈದ್ಯರನ್ನು ಖಾಯಂಗೊಳಿಸಲು ಸರ್ಕಾರಕ್ಕಿರುವ ತೊಂದರೆಗಳೇನು:

ಶ್ರೀಮತಿ ಉಮಾದೇವಿ ಎಂಬುವವರ ಪ್ರಕರಣದಲ್ಲಿ ಭಾರತ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪಿನ ಪ್ರಕಾರ ಯಾವುದೇ ಹುದ್ದೆಯನ್ನು ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರವೇ ತುಂಬಬೇಕಾಗುತ್ತದೆ. ಅದರಂತೆ ಗುತ್ತಿಗೆ ವೈದ್ಯಧಿಕಾರಿಗಳ ಸೇವೆಯನ್ನು ಸಕ್ರಮಗೊಳಿಸಲು ಅವಕಾಶವಿರುವುದಿಲ್ಲ.

ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ವುಂದ ಮತ್ತು ನೇಮಕಾತಿ ನಿಯಮಗಳಲ್ಲಿ ಕಲ್ಪಿಸಿರುವ ಅವಕಾಶದಂತೆ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ದಿಸೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಖಾಲಿಯಿರುವ 815 ವೈದ್ಯರ ಹುದ್ದೆಗಳನ್ನು ಲೋಕಸೇವಾ ಆಯೋಗದಿಂದ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಆದುದರಿಂದ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ವೈದ್ಯರನ್ನು ಖಾಯಂಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಆ) ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ವೈದ್ಯರ ಸಂಸ್ಥೆ ಎಷ್ಟು?

ಒಟ್ಟು 631 ವೈದ್ಯರು ಗುತ್ತಿಗೆ ಆಧಾರ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ.

ಶ್ರೀ ಕಿಮ್ಮನೆ ರತ್ನಾಕರ್:– ಮಾನ್ಯ ಅಧ್ಯಕ್ಷರೆ, ಲಿಖಿತ ಉತ್ತರ ಬಂದಿದೆ. ನನ್ನ ಪ್ರಶ್ನೆ ಪ್ರಮುಖವಾಗಿರತಕ್ಕದ್ದು, ಈ ಹಿಂದಿನ ಸದಸ್ಯರಿಗೆ ಹೇಳಿರತಕ್ಕಂಥ ಉತ್ತರದಲ್ಲೂ ಕೂಡ ಇಲ್ಲಿ 815 ಜನ ವೈದ್ಯರ ಹುದ್ದೆ ಖಾಲಿ ಇದೆ ಎಂದು ಹೇಳಿದ್ದೀರಿ. ಮಾನ್ಯ ಸಚಿವರು ರಾಜ್ಯಾದ್ಯಂತ 5000 ಹುದ್ದೆಗಳು ಖಾಲಿ ಇರುವುದಾಗಿ ಈಗಾಗಲೇ ಉತ್ತರ ಕೊಟ್ಟರು. ಜೊತೆಗೆ ಹಿಂದೆ 10 ವರ್ಷಗಳ ಹಿಂದೆಯೇ ಕೂಡ ಏನು contract basis ಮೇಲೆ ವೈದ್ಯರನ್ನು ತೆಗೆದುಕೊಂಡಿದ್ದರು, ನೇರ ನೇಮಕಾತಿ ಮೂಲಕ ಅವರನ್ನೂ ಕೂಡ ತೆಗೆದುಕೊಂಡಿದ್ದಾರೆ. ಈವರೆಗೆ ಆಗಿರತಕ್ಕ ವಿಳಂಬಕ್ಕೆ ಮಾನ್ಯ ಸಚಿವರು ಉತ್ತರ ಹೇಳಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ಈಗಿರತಕ್ಕ ವಿಳಂಬ ಏನಿದೆ, ಕಾನೂನಿನ ತೊಡಕು ಏನಿದೆ, 10 ವರ್ಷಗಳ ಹಿಂದೆಯೇ ಅದು ಇತ್ತು. ಈಗ ನೇರ ನೇಮಕಾತಿಗೆ ಆಗಿರತಕ್ಕಂಥ ತೊಂದರೆ ಏನು? ಈಗಾಗಲೇ ಅವರನ್ನು ತೆಗೆದುಕೊಳ್ಳಬೇಕಾಗಿತ್ತು. Supreme Court judgment ಏನಿದೆ, ಅದು ಇದಕ್ಕೆ ಅಡ್ಡಿ ಬರುವುದಿಲ್ಲವೆಂದು ಹೇಳುತ್ತಾರೆ. ಈಗಾಗಲೇ ತಾವು ಲಿಖಿತವಾಗಿ ಕೊಟ್ಟಿದ್ದೀರಿ. 631 ಜನ ವೈದ್ಯರು ಇಲ್ಲಿದ್ದಾರೆಂದು ಹೇಳುತ್ತಿದ್ದೀರಿ. ಈಗಾಗಲೇ ಹಿಂದಿನ ನಮ್ಮ ಮಾನ್ಯ ಸದಸ್ಯರಿಗೆ ನೀವು ಉತ್ತರ ಕೊಡುವಾಗ 5 ಸಾವಿರ ಜನ ವೈದ್ಯರು ಖಾಲಿ ಇದ್ದಾರೆಂದು ಹೇಳಿದ್ದೀರಿ. ಇಲ್ಲಿ 815 ಜನ ವೈದ್ಯರ ಹುದ್ದೆ ಖಾಲಿ ಇದೆ ಎಂದು ಹೇಳಿದ್ದೀರಿ. ಬಜೆಟ್ ಮಂಡನೆಯಲ್ಲಿಯೂ ಕೂಡ 5000 ಜನ ವೈದ್ಯರ ಹುದ್ದೆ ಖಾಲಿ ಇದೆ ಎಂದು ಹೇಳಿದ್ದೀರಿ. ಈ ಎರಡು ಉತ್ತರಗಳ ಅರ್ಥ ನನಗೆ ಆಗಲಿಲ್ಲ. 815 ವೈದ್ಯರ ಹುದ್ದೆ...

ಅಧ್ಯಕ್ಷರು:– ಆಯಿತು, ಮತ್ತೆ repeat ಮಾಡಬೇಡಿ. ಆ ಬಗ್ಗೆ ಮಾನ್ಯ ಸಚಿವರು ಉತ್ತರ ಹೇಳುತ್ತಾರೆ.

ಶ್ರೀ ಬಿ. ಶ್ರೀರಾಮುಲು:– ಮಾನ್ಯ ಅಧ್ಯಕ್ಷರೆ, 815 ಜನ ವೈದ್ಯರ ಜೊತೆಯಲ್ಲಿ ಸುಮಾರು 4300 paramedical Staff ಅನ್ನು ತೆಗೆದುಕೊಳ್ಳಬೇಕೆಂದು ಸರ್ಕಾರ ಅನುಮೋದನೆ ಕೊಟ್ಟಿದೆ. ಸದ್ಯಕ್ಕೆ ಉಮಾದೇವಿಯವರ ಪ್ರಕರಣದಲ್ಲಿ Supreme Court Judgment ವೊಂದಿದೆ. ತಕ್ಷಣ ಗ್ರೂಪ್–ಡಿಯಲ್ಲಿ ಏನು ಕೆಲಸ ಮಾಡುತ್ತಿದ್ದಾರೆ, ಅವರನ್ನು ಖಾಯಂಗೊಳಿಸಬೇಕೆಂದರೆ, Supreme Court Judgment ಇರುವ ಕಾರಣ, ಅವರ್ಯಾರನ್ನೂ ಖಾಯಂಗೊಳಿಸಬಾರದೆನ್ನುವ ಪ್ರಶ್ನೆಯೊಂದಿದೆ. ಜೊತೆಯಲ್ಲಿ ಖಾಯಂಗೊಳಿಸಬೇಕೆಂಬ ಬಗ್ಗೆ ನಾನು ಮೊನ್ನೆ ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿದೆ. ನಮ್ಮ ಸಾರ್ವಜನಿಕ ಆಸ್ಪತ್ರಗಳಲ್ಲಿ ಗುತ್ತಿಗೆ ಆಧಾರದ ಮೇಲೆ 631 ಜನ ಏನು ಕೆಲಸ ಮಾಡುತ್ತಿದ್ದಾರೋ, ಅವರನ್ನು ಖಾಯಂಗೊಳಿಸಬೇಕಾಗಿದೆ. ಅವರ age ಮುಗಿಯುತ್ತಿದೆ., first priority ಅವರಿಗೆ ಕೊಡಿ, ಅವರಿಗೆ ಕೊಟ್ಟ ನಂತರ, ಕಡಿಮೆ ಬಂದಂತಹ Staffಗೆ Priority ಕೊಟ್ಟು ಅವರನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡುತ್ತಿದ್ದೇನೆ. ಯಾರನ್ನಾದರೂ ಖಾಯಂಗೊಳಿಸಬೇಕೆಂದರೆ, ಆ ಬಗ್ಗೆ ಪುನಃ Cabinetಗೆ ತೆಗೆದುಕೊಂಡು ಹೋಗಬೇಕಾಗುತ್ತದೆ. ನಾನು ಇದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು, ಯಾವ ರೀತಿಯಲ್ಲಿ ಇದನ್ನು ಸರಿಪಡಿಸಬಹುದು ಎಂದು ನೋಡಿ, ಇದನ್ನು ಸರಿಪಡಿಸಿಕೊಡುವಂತಹ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ:– ಮಾನ್ಯ ಅಧ್ಯಕ್ಷರೆ, ಇವತ್ತಿನ ಪಟ್ಟಿಯಲ್ಲಿ ನನ್ನದೊಂದು ಪ್ರಶ್ನೆ ಇದೆ.

ಶ್ರೀ ನೆ.ಲ. ನರೇಂದ್ರಬಾಬು:– ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ ಪ್ರಸ್ತಾಪಿಸಲು ಅವಕಾಶ ಕೊಡಿ.

ಅಧ್ಯಕ್ಷರು:– ನಾನು ಆಗಲೇ ತಮ್ಮ ಹೆಸರನ್ನು ಕರೆದಾಗ ತಾವು ಅಗಿದ್ದಿರಿ. ಇದರಿಂದಾಗಿ ನೀವು ನಿಮ್ಮ opportunity ಕಳೆದುಕೊಂಡಿದ್ದೀರಿ. ಈ ರೀತಿ absent ಅಗಿದ್ದವರಿಗೆ ಮುಂದೆ ಟೈಮ್ ಉಳಿದರೆ, ನಾನು ಅವಕಾಶ ಕೊಡುತ್ತೇನೆ. ಮಾನ್ಯ ಕೃಷ್ಣಮೂರ್ತಿಯವರೆ, ಮಾನ್ಯ ಸಮಾಜ ಕಲ್ಯಾಣ ಸಚಿವರು ಬಂದ ನಂತರ ನಾನು ನಿಮಗೆ ಉತ್ತರ ಕೊಡಿಸುತ್ತೇನೆ.